# ಕ್ಯಾನ್ಸರನ್ನು ಎದುರಿಸಿ ಗೆದ್ದುಬಂದ ಗಿರೀಶ್‌ರವರ ಕಥೆ



ಗಿರೀಶ್ ಆರ್ ಗೌಡ, ಬೆಂಗಳೂರಿನ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದ ಕಿಕ್ ಬಾಕ್ಸಿಂಗ್ ಪಟು, ಈ ಮಾರ್ಚ್‌ನಲ್ಲಿ ತಮ್ಮ ಎಂದಿನ ಅಭ್ಯಾಸವನ್ನು ನಡೆಸುತ್ತಿದ್ದಾಗ, ಬೆನ್ನುಹುರಿಯಲ್ಲಿ ತೀವ್ರ ನೋವು ಕಾಣಿಸಿಕೊಂಡು ಮೂರ್ಚಿತರಾಗಿ ನೆಲಕ್ಕುರುಳಿದರು. ಕೆಲವು ದಿನಗಳ ಹಿಂದೆ ಅವರಿಗೆ ಸಣ್ಣಗೆ ಜ್ವರ ಕಾಣಿಸಿಕೊಂಡಿತ್ತು. ಅವರ ಕುಟುಂಬ ವೈದ್ಯರು ಅದಕ್ಕೆ ಸಾಮಾನ್ಯ ಜ್ವರದಂತೆ ಚಿಕಿತ್ಸೆ ನೀಡಿದ್ದರು. ಆದರೆ ಮೂರ್ಚಿತರಾಗಿ ಕೆಳಗುರುಳಿದ ಮೇಲೆ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಪರೀಕ್ಷೆಗಳಿಂದ ಅವರ ಪ್ಲೇಟ್‌ಲೆಟ್ ಎಣಿಕೆ ಕೇವಲ 6,000ಕ್ಕಿಳಿದಿರುವುದು ಕಂಡುಬಂದಿತು, ಇದು ಗಂಡಸರಿಗೆ ಸಾಮಾನ್ಯವಾಗಿ 15,000 ಇರಬೇಕು. ವಿವರವಾದ ರಕ್ತ ಪರೀಕ್ಷೆ ಮತ್ತು ಪೆರಿಫೆರಲ್ ಸ್ಮಿಯರ್ ಪರೀಕ್ಷೆಗಳು, ಎಂಟು ಬಾರಿ ರಾಷ್ಟ್ರೀಯ ಚಿನ್ನದ ಪದಕ ಮತ್ತು ಏಷ್ಯಾ ಹಾಗೂ ಜಾಗತಿಕ ಸ್ಪರ್ಧೆಯಲ್ಲಿ ರಜತ ಪದಕಗಳ ವಿಜೇತನಿಗೆ ಅಕ್ಯೂಟ್ ಪ್ರೋಮೈಲೊಸೈಟಿಕ್ ಲ್ಯೂಕೆಮಿಯಾ, ಒಂದು ವಿಧದ ಕ್ಯಾನ್ಸರ್ ಇದೆ ಎಂದು ತಿಳಿಸಿದವು.

ಕ್ರೀಡಾಪಟುವಾದ ಗಿರೀಶ್ ಸದಾ ತಮ್ಮ ಆರೋಗ್ಯಕ್ಕೆ ಪ್ರಮುಖ ಆದ್ಯತೆ ನೀಡುತಿದ್ದರು. ಜನ ತಮ್ಮ ದೇಹವನ್ನು ಧೂಮಪಾನ, ಮದ್ಯಪಾನ, ಮಾದಕವಸ್ತುಗಳ ಸೇವನೆಯಿಂದ ಹಾನಿಗೊಳಿಸಿಕೊಳ್ಳುತ್ತಾರೆ ಎಂಬುದು ಕ್ಯಾನ್ಸರ್ ಪ್ರಪಂಚದಲ್ಲಿರುವ ಸಾಮಾನ್ಯ ತಪ್ಪು ಗ್ರಹಿಕೆ. ಆಸ್ಪತ್ರೆಯೊಂದರ ತೀವ್ರನಿಗಾ ಘಟಕದಲ್ಲಿ ಆತಂಕಭರಿತ ಕೆಲವು ದಿನಗಳನ್ನು ಕಳೆದ ನಂತರ ಗಿರೀಶ್ ರನ್ನು ಯಲಹಂಕದಲ್ಲಿರುವ ಸೈಟ್‌ಕೇರ್ ಕ್ಯಾನ್ಸರ್ ಆಸ್ಪತ್ರೆಗೆ ಸೇರಿಸಲಾಯಿತು. ಆಸ್ಪತ್ರೆಯ ಹಿಮ್ಯಾಟೋ ಆಂಕಾಲಜಿಯ ಹಿರಿಯ ವೈದ್ಯರಾದ ಡಾ.ಹರಿ ಮೆನನ್ ಗಿರೀಶ್ ರವರಿಗೆ ತಕ್ಷಣ ಚಿಕಿತ್ಸೆ ನೀಡಲಾರಂಭಿಸಿದರು. ಯೋಧರ ಮನಸ್ಸಿನವರಾದ ಗಿರೀಶ್ ಆರಂಭದಿಂದಲೇ ಕಾಯಿಲೆಯನ್ನು ಧೈರ್ಯವಾಗಿ ಎದುರಿಸಿದರು.

ವಿಶೇಷ ತಜ್ಞರು ಮತ್ತು ವಿಶೇಷ ತರಬೇತಿ ಹೊಂದಿದ ಸಿಬ್ಬಂದಿ ಅವರಿಗೆ ಚಿಕಿತ್ಸೆ ನೀಡಿದರು. ಇದಕ್ಕೆ ಬೆಂಬಲವಾಗಿ ರೋಗಿಯ ಮಾರ್ಗದರ್ಶಕರಿದ್ದರು ಮತ್ತು ಆಸ್ಪತ್ರೆಯಲ್ಲಿನ ಹಿತವಾದ ವಾತಾವರಣವೂ ಪುಷ್ಟಿ ನೀಡಿತು. ಸೈಟ್‌ಕೇರ್ ನಲ್ಲಿನ ಸೌಕರ್ಯಗಳು ಕೆಲವೊಮ್ಮೆ ಅಸಾಧ್ಯ ಮತ್ತು ಬಹಳನೋವಿನ ನಡುವೆಯೂ ಚಿಕಿತ್ಸೆಯಲ್ಲಿ ಗಿರೀಶ್ ಸಂಪೂರ್ಣ ನಂಬಿಕೆ ಇಡಲು ಸಹಾಯಕವಾದವು. ಅವರಿಗೆ ಶೀಘ್ರ ಹಾಗೂ ಆರೋಗ್ಯಕರ ಚೇತರಿಕೆಯಲ್ಲಿ ವಿಶ್ವಾಸ ಉಂಟಾಯಿತು. 'ಸೈಟ್‌ಕೇರ್‌ನಲ್ಲಿ ವೈದ್ಯರು ಮತ್ತು ಸಿಬ್ಬಂದಿ ಬಹಳ ಚುರುಕಾಗಿದ್ದು ಮಾಹಿತಿ ಹೊಂದಿದವರಾಗಿದ್ದರು. ಅವರಿಗೆ ತಾವೇನು ಮಾಡುತ್ತಿದ್ದೇವೆ ಎಂದು ತಿಳಿದಿತ್ತು ಮತ್ತು ನನ್ನ ಪ್ರಶ್ನೆಗಳಿಗೆ ಪೂರ್ಣ ವಿಶ್ವಾಸದಿಂದ ಉತ್ತರಿಸುತ್ತಿದ್ದರು' ಎನ್ನುತ್ತಾರೆ ಗಿರೀಶ್.

ಗಿರೀಶ್ ಆರೋಗ್ಯದಲ್ಲಾದ ನಿರಂತರ ಪ್ರಗತಿ ಅವರ ಕುಟುಂಬ ಸದಸ್ಯರು ಮತ್ತು ಸ್ನೇಹಿತರನ್ನು ಚಕಿತಗೊಳಿಸಿತು. ಮತ್ತೆ ತನ್ನ ಕಾಲಮೇಲೆ ತಾನು ನಿಂತು ತನ್ನ ಹಿಂದಿನ ಅಭ್ಯಾಸಕ್ಕೆ ಮರಳುವ ಅವರ ದೃಢ ವಿಶ್ವಾಸ ಸಿಬ್ಬಂದಿವರ್ಗವನ್ನೂ ಬೆರಗುಗೊಳಿಸಿತು. 'ಗಿರೀಶ್‌ಗೆ ಒಂದು ಮಾರಣಾಂತಿಕ ಕಾಯಿಲೆ ಇದೆಯೆಂದು ಪರೀಕ್ಷೆಗಳಿಂದ ತಿಳಿದುಬಂದಿತು. ಈ ಕಾಯಿಲೆ ಮತ್ತು ಕೆಲವು ಚಿಕಿತ್ಸೆಯ ಅಡ್ಡ ಪರಿಣಾಮಗಳ ಕಾರಣ ವಿಶಿಷ್ಟ ಸವಾಲುಗಳನ್ನು ಎದುರಿಸಬೇಕಾಯಿತು. ಅವರ ಶರೀರ ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುವುದರ ಜೊತೆಗೆ ಗಿರೀಶ್ ರವರು ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿದ್ದಾರೆ. ಈಗ ಅವರು ತಮ್ಮ ಕ್ರೀಡಾ ಜೀವನವನ್ನು ಪುನಶ್ಚೇತನಗೊಳಿಸುತ್ತಿದ್ದಾರೆ ಮತ್ತು ನಿಯಮಿತ ಅಭ್ಯಾಸವನ್ನು ಆರಂಭಿಸಿದ್ದಾರೆ. ಇನ್ನು ಕೆಲವು ತಿಂಗಳುಗಳಲ್ಲಿ ಅವರ ಚಿಕಿತ್ಸೆಯು ಪೂರ್ಣಗೊಳ್ಳಲಿದೆ. ವೈದ್ಯವಿಜ್ಞಾನದಲ್ಲಿ ಕ್ಯಾನ್ಸರಿನ ನಿಶ್ಚಿತ ಸಮಸ್ಯೆಗಳಿಗೆ ನಿವಾರಣೆಗೂ ದಾರಿ ಮಾಡಿಕೊಡುವ ಉತ್ತರಗಳಿದ್ದರೂ, ರೋಗಕ್ಕೆ ತುತ್ತಾದವರು ಸಕಾರಾತ್ಮಕ ಮನೋಧರ್ಮದವರಾಗಿದ್ದು ಗುಣಮುಖರಾಗಲು ನಿರಂತರ ಪರಿಶ್ರಮ ಮಾಡುವವರಾಗಿರುವುದೂ ಅಷ್ಟೇ ಮುಖ್ಯ. ಕ್ಯಾನ್ಸರ್ ರೋಗಿಗಳಿಂದ ನಾವು ಏನನ್ನು ನಿರೀಕ್ಷಿಸುತ್ತೇವೋ, ಅದಕ್ಕೆ ಗಿರೀಶ್ ಸೂಕ್ತ ಉದಾಹರಣೆ. ಅಂದರೆ ಸಕಾರಾತ್ಮಕ ರಾಗಿರುವವರು, ತಮ್ಮ ಕನಸುಗಳನ್ನು ಬೆನ್ನಟ್ಟುವವರು ಹಾಗೂ ಈ ದಾರಿಯಲ್ಲಿ ಎದುರಾಗುವ ಅನಾರೋಗ್ಯದಂತಹ ಸಮಸ್ಯೆಗಳು ಉಂಟಾದರೂ ಅವನ್ನು ನನಸಾಗಿಸಿಕೊಳ್ಳುವವರು' ಎಂದು ಡಾ.ಹರಿ ಮೆನನ್ ಹೇಳುತ್ತಾರೆ.

ತಮ್ಮ ದಿನನಿತ್ಯದ ಅಭ್ಯಾಸವನ್ನು ಮುಂದುವರೆಸುವ ಕಾತುರದಿಂದ ಗಿರೀಶ್ ರವರು ತಮ್ಮ ಚಿಕಿತ್ಸೆಯ ನಂತರ ಪ್ರತಿದಿನ ಬೆಳಿಗ್ಗೆ 3 ಗಂಟೆಗಳ ಕಾಲ ಜಿಮ್‌ಗೆ ಭೇಟಿನೀಡುತ್ತಾರೆ. ವ್ಯಾಯಾಮ ಮಾಡಲು, ಓಡಲು ಆರಂಭಿಸಿದ್ದಾರೆ, ಸ್ವಲ್ಪ ನಿಧಾನಗತಿಯಲ್ಲಿರಬಹುದು. ಗಿರೀಶ್ ರವರ ಆರೋಗ್ಯದಲ್ಲಿ ಒಳ್ಳೆಯ ಚೇತರಿಕೆ ಕಂಡುಬರುತ್ತಿದೆ. ಇನ್ನೆಂಟು ತಿಂಗಳುಗಳಲ್ಲಿ ಅವರು ಕಿಕ್ ಬಾಕ್ಸಿಂಗ್‌ಗೆ ಮರಳುವ ಉಮೇದಿನಲ್ಲಿದ್ದಾರೆ.

ಅವರ ಪ್ರಗತಿ ಕುರಿತು ಡಾ.ಮೆನನ್ ರವರು, 'ಗಿರೀಶ್ ರವರು ಮಾರಣಾಂತಿಕವಾಗಬಹುದಾದ ಗಂಭೀರವಾದ ಕಾಯಿಲೆಗೆ ತುತ್ತಾಗಿದ್ದಾರೆ ಎಂದು ತಿಳಿದುಬಂದಿತು. ಆದರೆ ಅವರುತಮಗೆದುರಾದ ಸವಾಲುಗಳನ್ನು ಧೈರ್ಯದಿಂದ ಎಂದುರಿಸುತ್ತಾ ಗಟ್ಟಿಯಾಗಿ ಮುಂದುವರೆಯುತ್ತಿದ್ದಾರೆ. ತಮ್ಮ ಆರೋಗ್ಯ ಉತ್ತಮಗೊಳಿಸುವತ್ತ ಸಂಪೂರ್ಣ ಗಮನ ಹರಿಸಿದ್ದಾರೆ ಮತ್ತು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ' ಎನ್ನುತ್ತಾರೆ.

ಪ್ರಸ್ತುತ ಬೆಂಗಳೂರಿನಲ್ಲಿ ಫಿಟ್ನೆಸ್ ತರಬೇತುದಾರರಾಗಿ ಕೆಲಸ ಮಾಡುತ್ತಿರುವ ಗಿರೀಶ್ ರವರು ತಮ್ಮ ಮೊದಲ ದರ್ಜೆಯ ಕ್ರೀಡೆಯೆಡೆಗೆ ಮರಳಿ ಪುಟಿದು 2018ರಲ್ಲಿ ನಡೆಯಲಿರುವ ರಾಷ್ಟ್ರೀಯ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಲ್ಲಿದ್ದಾರೆ. ದಿಟ್ಟತನ ಮತ್ತು ಪಟ್ಟುಬಿಡದ ಶಕ್ತಿಯನ್ನು ಪ್ರತಿಬಿಂಬಿಸುವ ಹಾಗೂ ಕ್ಯಾನ್ಸರನ್ನು ಎದುರಿಸಿ ಪರಿಪೂರ್ಣ ಜೀವನದ ಭರವಸೆ ತೋರುವ ಗಿರೀಶ್ ಈಗ ಹಲವು ಜನರಿಗೆ ಮಾದರಿಯಾಗಿದ್ದಾರೆ.

**CYTECARE**
CANCER HOSPITALS

**ಹೆಚ್ಚಿನ ಮಾಹಿತಿಗಾಗಿ www.cytecare.comಗೆ ಭೇಟಿ ನೀಡಿ.**
**ಯಲಹಂಕ, ಏರ್‌ಪೋರ್ಟ್ ರಸ್ತೆ, ಬೆಂಗಳೂರು** | 1800 123 6767